# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಗುರುದಕ್ಷಿಣೆ

ಕವಿ

## ಇಟಗಿ ಮಹಾಬಲೇಶ್ವರ ಭಟ್ಟ

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ನವೆಂಬರ್ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

# ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

# ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**
**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**
**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಮಹಾಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಗೊತ್ತಿಲ್ಲ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೧೮

**ಪಾತ್ರಗಳು:**

ದ್ರುಪದ, ದೂತ, ದ್ರೋಣ, ಕೌರವಾದಿಗಳು, ಭೀಷ್ಮ, ಏಕಲವ್ಯ, ಅರಾವಳಿ (ಏಕಲವ್ಯನ ತಾಯಿ), ಅರ್ಜುನ

**ಕಥಾ ಸಾರಾಂಶ:**

ಪಾಂಚಾಲದ ದೊರೆಯಾದ ಪ್ರಷದ ಮಹಾರಾಜನ ಮಗನಾದ ಯಜ್ಞಸೇನನೆಂಬ ನಾಮಾಂತರವನ್ನು ಹೊಂದಿದ ದ್ರುಪದನು ಒಡ್ಡೋಲಗದಲ್ಲಿ ಮಂಡಿಸಿದ್ದಾನೆ. ದ್ವಾರಪಾಲಕನು ಬ್ರಾಹ್ಮಣನೋರ್ವ ಸತಿ-ಸುತರೊಂದಿಗೆ ಬಾಗಿಲಿಗೆ ಬಂದಿಹನೆಂಬ ಸಂದೇಸವನ್ನು ತರುತ್ತಾನೆ. ರಾಜನ ಒಪ್ಪಿಗೆಯಂತೆಯೇ ಸಭಾ ಪ್ರವೇಶ ಮಾಡಿದ ದ್ರೋಣನಿಗೆ ಅವಮಾನವಾಗುತ್ತದೆ. ಅಪಹಾಸ್ಯ ಗೈದ ಬಾಲ್ಯಸ್ನೇಹಿತ ದ್ರುಪದನಿಗೆ ಬುದ್ಧಿಯನ್ನು ಕಲಿಸುತ್ತೇನೆಂಬ ಪ್ರತಿಜ್ಞಾ ಬದ್ಧನಾಗುತ್ತಾನೆ ದ್ರೋಣ. ದ್ರೋಣನ ಸ್ವಗತ – ಪತ್ನಿಯ ಸಹೋದರನಾದ ಕೃಪನಿರುವ ಹಸ್ತಿನಾಪುರದೆಡೆ ಪ್ರಯಾಣ.

ಕರಿಪುರದ ಆಟದ ಅಂಗಳದಲ್ಲಿ ರಾಜಕುಮಾರರು ಆಡುತ್ತಿರುವಾಗ ಚೆಂಡೊಂದು ಬಾವಿಗೆ ಬಿದ್ದು, ಎತ್ತಲಾಗದೆ ಗೋಳಿಡುತ್ತಾರೆ. ಅಲ್ಲಿಗೈತಂದ ದ್ರೋಣನು ಸಹಾಯ ಮಾಡುತ್ತಾನೆ. ಮಕ್ಕಳು ಅಜ್ಜನಾದ ಭೀಷ್ಮನಲ್ಲಿ ವಿವರಿಸುತ್ತಾರೆ. ದ್ರೋಣನ ಇತಿವೃತ್ತವನ್ನು ಕೇಳಿದ ಭೀಷ್ಮರು, ಮಕ್ಕಳಿಗೆ ಬಿಲ್ವಿದ್ಯೆಯ ಪಾಠವನ್ನು ಮಾಡಿಕೊಂಡಿರೆಂದು ಆಶ್ರಯವನ್ನೀಯುತ್ತಾರೆ.

ಬಿಲ್ವಿದ್ಯೆಯ ಕನಸನ್ನು ಕಾಣುತ್ತಿರುವ ಏಕಲವ್ಯನೆಂಬ ಕಿರಾತ ಕುವರನು ತಾಯಿಯಿಂದ ಬೀಳ್ಕೊಂಡು ಹಸ್ತಿನಾಪುರಕ್ಕೆ ಬಂದು ದ್ರೋಣರಿಗೆ ಶರಣಾಗುತ್ತಾನೆ. ದ್ರೋಣನು ತನ್ನ ಕುರುಬಾಲಕರ ಹೊರತು ಅನ್ಯರಿಗೆ ವಿದ್ಯೆ ಕಲಿಸಲಾಗದ ಅಸಹಾಯಕತೆಯನ್ನು ಪ್ರಕಟಿಸುತ್ತಾನೆ. ನಿರಾಶೆ ಹೊಂದಿದ ಏಕಲವ್ಯನು ದ್ರೋಣನ ಮಣ್ಣಿನ ಮೂರ್ತಿಯನ್ನು ಮಾಡಿ ಅಭ್ಯಾಸ ನಿರತನಾಗುತ್ತಾನೆ. ದ್ರೋಣರನ್ನೊಡಗೊಂಡು ಬೇಟೆಯಾಡುತ್ತ ಬಂದ ಅರ್ಜುನನ ನಾಯಿಗೆ ಏಕಲವ್ಯನು ಬಾಣ ಬಿಡುತ್ತಾನೆ. ಶಬ್ದಬೇಧಿ ವಿದ್ಯೆಯ ಕೌಶಲವನ್ನು ಕಂಡು ಬೆರಗಾದ ಪಾರ್ಥನು ಗುರುಗಳನ್ನು ಆಕ್ಷೇಪಿಸುತ್ತಾನೆ. ದ್ರೋಣನು ತನ್ನನ್ನೇ ಗುರುವಾಗಿಸಿಕೊಂಡು ಗುರಿಯರಿತ ಏಕಲವ್ಯನಲ್ಲಿ ಹೆಬ್ಬೆರಳನ್ನು ದಕ್ಷಿಣೆಯಾಗಿ ಪಡೆಯುತ್ತಾನೆ.

ಕೌರವ-ಪಾಂಡವರನ್ನು ಕರೆದು ದ್ರೋಣನು ವಿದ್ಯಾಮಂಗಲದೀ ಸಮಯಕ್ಕೆ ದ್ರುಪದನನ್ನು ಬಂಧಿಸಿ ತರುವಂತೆ ಸೂಚಿಸುತ್ತಾನೆ. ದ್ರುಪದ – ಕೌರವರ ಯುದ್ಧ. ಕೌರವರ ಸೋಲು, ಅರ್ಜುನ – ದ್ರುಪದರ ಯುದ್ಧ. ಪಾರ್ಥನು ದ್ರುಪದನನ್ನು ಬಂಧಿಸಿ ಕರೆತಂದು ದ್ರೋಣನ ಮಂಚಕ್ಕೆ ಬಿಗಿಯುತ್ತಾನೆ. ದ್ರೋಣನಾದರೋ ತನ್ನ ಕೈವಶವಾದ ಸಂಪೂರ್ಣ ರಾಜ್ಯದಲ್ಲಿನ ಅರ್ಧವನ್ನು ದ್ರುಪದಂಗಿತ್ತು ಬದುಕಿಕೊ ಎಂದು ಜರೆಯುತ್ತಾನೆ. ಮನದಲ್ಲಿ ಕುದಿಯುತ್ತ ದ್ರುಪದನ ನಿರ್ಗಮನ, ದ್ರೋಣನು ಮಕ್ಕಳನ್ನು ಆಶೀರ್ವದಿಸಿದಲ್ಲಿಗೆ ಕಥೆಗೆ ಮಂಗಲವು.

**ಕವಿ ಪರಿಚಯ:**

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಇಟಗಿಯವರಾದ ಮಹಾಬಲೇಶ್ವರ ಭಟ್ಟರು ೧-೬-೧೯೬೮ ರಂದು ಜನಿಸಿದವರು. ಕೃಷಿಕ. ಯಕ್ಷಗಾನ ಕಲಾವಿದ. ಇಟಗಿಯ 'ಕಲಾ ಭಾಸ್ಕರ' ಸಾಂಸ್ಕೃತಿಕ ಸಂಘದ ಅಧ್ಯಕ್ಷ. ತಂದೆ ರಾಮಕೃಷ್ಣ ಭಟ್ಟ, ತಾಯಿ ಸರಸ್ವತಿ. ಅಶ್ವಿನಿ ವಿಜಯ, ಗುರುದಕ್ಷಿಣೆ, ಗೋಮಹಿಮೆ ಹಾಗೂ ದಂಡಕಮೋಕ್ಷ ಈ ಪ್ರಸಂಗಗಳನ್ನು ರಚಿಸಿದ್ದಾರೆ.

**ಟಿಪ್ಪಣಿ:**

ಈ ಪ್ರಸಂಗವು ಮಕ್ಕಳ ಪ್ರದರ್ಶನಗಳಲ್ಲಿ ಜಾಸ್ತಿ ಬಳಕೆಯಾಗಿದೆ.

# ಪ್ರಸಂಗ ಸಾಹಿತ್ಯ

**ಭಾಮಿನಿ**
ಪೃಥುವಿ ತತ್ವದ ಮೂಲ ರೂಪನೆ | ಪೃಥುಲ ಕುಕ್ಷಿಯ ದೇವ ಮನಸಿನ |
ಮಥನದಲಿ ನವನೀತ ದೊರೆಯುವ ತೆರದಿ ಹರಸಯ್ಯ ||
ಕಥನ ರಚನೆಗೆ ಕೈಯನಿಕ್ಕಿದೆ | ಸತತ ಸಿದ್ಧಿಯನಿತ್ತು ಕರುಣಿಸು |
ಕೃತಿಗೆ ಕೀರ್ತಿಯ ಮತಿಗೆ ಮಂಗಳ ಪಾಲಿಸೈ ಗಣಪ ||1||

**ಸೌರಾಷ್ಟ್ರ - ತ್ರಿವುಡೆ**
ತಪನನಂತೆಸೆಯುತಿಹ ಭೂವರ |
ದ್ರುಪದನೊಡ್ಡೋಲಗದಿ ಮಂಡಿಸಿ |
ವಿಪುಲ ವೈಭವದಿಂದ ಮೆರೆದನು | ಸಫಲನಾಗಿ || 1 ||
ಹಸುಳೆಯೆನ್ನನು ಅಗ್ನಿವೇಶ್ಯರು |
ಮಿಸುನಿಯಾಗಿಸಿ ವಿದ್ಯೆಯಿತ್ತರು |
ವಸುಧೆ ಪಾಂಚಾಲಕಧಿಪತಿಯಾ | ಗಿಸಿದರಂದು || 2 ||  3 ||

**ಕಂದ**
ಧರಣಿಪನೀ ಪರಿ ವಿಭವದಿ |
ಮೆರೆವೋಲಗದಲ್ಲಿ ಸರಸದೊಳಗಿರಲಾಗಂ ||
ದೊರೆಯಾಣತಿಯಿಂ ಬಾಗಿಲ |
ಚರನೈತಂದಡಿಯ ಪಿಡಿದು ನುಡಿದ ವಿನಯದಿಂ||1|| 4 ||

**ಸುರುಟಿ - ಆದಿ**
ಕೇಳೆನ್ನಯ ದೊರೆಯೆ| ಈ ಪಾಂ | ಚಾಲದ ಘನ ಸಿರಿಯೆ ||
ಊಳಿಗ ದ್ವಾರದಲಿ | ನೇಮವ | ಪಾಲಿಸೆ ನಾವಲ್ಲಿ ||1||
ಬಂದನು ಬಡ ಹಾರ್ವ | ಸತಿಸುತ | ರೊಂದಾಗುತಲೋರ್ವ ||
ಸಂದರ್ಶನ ಬಯಸೆ | ತಮ್ಮೆಡೆ | ಬಂದೆನು ನಿಲ್ಲಿಸುತೆ ||2|| 6 ||

**ಭೈರವಿ - ಝಂಪೆ**
ಮೆಚ್ಚುಗೆಯ ಎಲೆಬಂಟ | ಸಚ್ಚರಿತರಾಗಿಹರ ||
ಇಚ್ಛೆಯನು ಸಲ್ಲಿಸುವೆ | ಸೂಚ್ಯದಲಿ ಕಳುಹು ||1||7 ||

**ದೇವಗಾಂಧಾರ - ಏಕ (ಸಾಂಗತ್ಯ)**
ಸಡಗರದಲಿ ದ್ರೋಣ ನಡೆತಂದು ಸಭೆಯಲ್ಲಿ | ಒಡನುಸುರಿದನು ಭೂವರಗೆ ||
ಪೊಡವಿಪಾಲನೆ ಯಾಕೆ ಒಡನಾಡಿಯೆನ್ನನು| ನುಡಿಸದೆ ಸೆಟೆದು ನಿಂದಿರುವೆ ||1|| 8 ||

**ಭೈರವಿ - ಅಷ್ಟ**
ಯಾರಯ್ಯ ಬಡಬ್ರಾಹ್ಮಣ | ಬಲು ಗರ್ವವ |
ತೋರುವೆ ನೀನೀಕ್ಷಣ ||
ಧಾರಿಣೀಶಗೆ ಬಡ | ಹಾರುವ ಸಮವೇನು |
ಸಾರಿದರೀಗುತ್ತಮ || 1 || 9 ||

**ತೋಡಿ - ರೂಪಕ**
ಸ್ನೇಹವಿಂದು ಮರೆವೆಯಾಯಿತೆ | ಅಧಿಕಾರಜನ್ಯ |
ಮೋಹವೆಲ್ಲ ಮೇರೆ ಮೀರಿತೆ ||
ಸ್ನೇಹವೆಂದು ಬಹು ಪವಿತ್ರ | ದ್ರೋಹ ಬಗೆಯಬೇಡ ಬದುಕ |
ರೂಹಿಗೆಂದು ಹಸುವನೊಂದ | ದೇಹಿಯೆನುವ ಎನಗೆ ನೀಡು || 1 || 10||

**ಮಾರವಿ - ಏಕ**
ಅಹಹ ವಿಚಾರ ವಿಹೀನನೆ ಸ್ವಪ್ನದಿ | ವಿಹರಿಸುತಿಹೆಯೇನೈ||
ಮಹಿಪತಿಯೆದುರಲಿ ಮಿತಿ ಮೀರಿದ ನಡೆ | ಬಹುತರದಪಹಾಸ್ಯ ||1||
ಮತಿಗೇಡಿಯೆ ಕೇಳಾನಿಹೆ ಕ್ಷಿತಿಯೊಳು | ಅತುಲಿತ ಬಲಭೀಮ ||
ಸತಿಸುತರೊಂದಿಗೆ ಪಥ ಪಿಡಿದಲೆಯುವೆ | ಕ್ಷುತಿ ಬಾಧೆಯ ಹೊಂದಿ ||2||
ಸಂಜೆಯ ಕೂಳ ವ್ಯವಸ್ಥೆಯ ಗೊಳಿಸುವೆ | ಭುಂಜಿಸು ಮುದದಿಂದ ||
ನಂಜಿನ ನುಡಿಗಳ ಗಳಹುವ ನಿನ್ನನು | ಭಂಜಿಸುವೆನು ಬಿಡದೆ || 3 || 13 ||

**ವಾರ್ಧಕ ಅರ್ಧ**
ಎನಲು ರೋಷಾವೇಶ ಹೊಂದುತಲಿ ಕಲಶಸುತ |
ತನುಮರೆದು ಕಂಗಳಿಂ ಕಿಡಿಸೂಸಿ ಜಟೆ ಬಿಗಿದು |
ಕಿನಿಸಿನಿಂ ನೆಲಕುಟ್ಟಿ ಘನಶಪಥ ವಾಕ್ಯದಿಂ ಜನಪಾಲಗಿಂತೆಂದನು ||1|| 14 ||

**ಘಂಟಾರವ - ಅಷ್ಟ**
ಮುಚ್ಚು ಮುಚ್ಚೆಲೋ ವದನವ ದ್ರುಪದನೆ |
ನಿಚ್ಚಟದಿ ನೀ ಹುಚ್ಚನಾಗಿಹೆ | ಹೆಚ್ಚಿರುವ ಅಧಿಕಾರದಿ ||1||
ಬಡವನೆಂದೆಯ ಶಪಥವ ಕೇಳೆಲೋ |
ಪಡೆದ ವಿದ್ಯೆಯ ಧಾರೆ ಯೆರೆವುತ | ಸಿಡಿಲ ಮರಿಯನು ಸೃಷ್ಟಿಸಿ ||2||
ರಣವ ಗಂಟಿಕ್ಕಿ ಹೆಡೆಮುರಿ ಬಿಗಿವುತ |
ಗೆಣೆತನದ ಪಾಠವನು ಪೇಳುವೆ | ಬಿನುಗೆ ಮೂರ್ಖ ಮಹೀಶನೆ || 3 || 17 ||

**ಭಾಮಿನಿ**
ಎಂದು ಗಜರುತ ತೆರಳೆ ಕುಂಭಜ | ಬಂದುದೆಲ್ಲವ ನೋಡಿಕೊಳ್ಳುವೆ |
ನೆಂದು ತಾನತಿ ದೃಢದಿ ನಿರ್ಧರಿಸಿರ್ದ ದ್ರುಪದಾಖ್ಯ ||
ಬಂದ ಪಥವಿಡಿದಂಗನೆಯು ಸುತ | ರೊಂದುಗೂಡುತ ದ್ರೋಣ ಮನದಲಿ |
ನೊಂದುಕೊಂಡನು ನೆನೆನೆನೆದು ಹೀನಾಯ ಪಾಡುಗಳ || 1 || 18 ||

**ಆರ್ಯಸವಾಯಿ - ಏಕ**
ತುತ್ತಿನ ಚೀಲಕೆ ಚಿಂತೆಯೆ ಅನ್ನವು |
ಮತ್ತಪಮಾನವೆ ಮೇಲ್ವಸನ ||
ನಿತ್ಯದ ಬಡತನ ಶಾಪವೆ ನಿಜನಿಜ |
ಹಸ್ತಿನಪುರದೆಡೆ ತೆರಳುವೆನು ||1|| 19 ||

**ಸಾಂಗತ್ಯ - ರೂಪಕ**
ಅಂತರಂಗದ ತರಂಗದಿ ದ್ರೋಣ ನಡೆತರೆ |
ಗಂತವ್ಯ ಹಸ್ತಿನಾಪುರವು ||
ಕಂತುವಿನಂತೆಸೆಯುವ ಬಾಲರೋಳಿಯು |
ಅಂತಕ್ರೀಡೆಯೊಳಿತ್ತು ಜಸದಿ ||1|| 20 ||

**ನಾಟಿ – ತ್ರಿವುಡೆ**
ಆಟವಾಡುತ ಬಂದರು | ಕೂಟದಲಿ ಶಶಿಕುಲಜರು ||
ಸಾಟಿಯಿಲ್ಲದ ಚೂಟಿಯಿಂದಲೆ | ದಾಟದಲಿ ಸುಕುಮಾರರು ||1||
ಮೀರಿದುತ್ಸಹ ಬೀರುತ | ತೀರದಲಿ ಚೆಂಡಾಡುತ ||
ತೂರಿ ಬುಗುರಿಯ ಚಿಣ್ಣಿ ಕೋಲಲಿ | ಭಾರಿ ತೋಷವ ಹೊಂದುತ || 2 || 22 ||

**ಕುಸುಮ ಷಟ್ಪದಿ**
ಆಳ ಭಾವಿಗೆ ಚೆಂಡು | ಬೀಳೆ ಬಾಲರು ಕಂಡು |
ಕೋಲಾಹಲವನೆಬ್ಬಿಸಿದರೆಲ್ಲರೂ ||
ಮೇಳವಿಸಿದಾ ದ್ರೋಣ | ಕೇಳಿ ಹುಯ್ಯಲನು ಕುಶ |
ದಾಳಿಯಿಂದೊಂದಕಭಿಮಂತ್ರಿಸಿದನೂ || 1 || 23 ||

**ನವರೋಜು - ಏಕ**
ಚೆಂಡಿದು ಮೇಲಕೆ ಬಂತು | ಊ |
ದ್ದಂಡನೆ ವಂದನೆಯಿಂತು ||
ಚಂಡ ಮಂತ್ರಬಲ ಕಂಡೆವು ನಾವ್ ಹಳ |
ವಂಡದೊಳಿರೆ ನೀ ಜೊಂಡೊಳಗೆತ್ತಿದೆ ||1||
ದ್ವಿಜವರ ನೀವ್ಯಾರಯ್ಯ | ಪೇಳ್ |
ಬಿಜಯಂಗೈಸಿದ ಪರಿಯ ||
ಗಜಪುರದರಸನ ಸುತರಾಗಿಹೆವೈ |
ಸುಜನ ವಿಚಾರವನರುಹುವೆ ಹಿರಿಯಗೆ ||2|| 25 ||

**ಕೇದಾರಗೌಳ ಅಷ್ಟತಾಳ**
ಪುಟವಿಟ್ಟ ಪುತ್ಥಳಿ ಮನಸಿನ ಬಾಲರೆ |
ದಿಟವಿದು ನೀವೆಂದುದು ||
ಘಟನೆಗಳೆಲ್ಲವ ಮುತ್ತಾತಗುಸುರಲ |
ಕುಟಿಲನು ಮನ್ನಿಪನು ||1|| 26 ||

**ಸೌರಾಷ್ಟ್ರ - ಅಷ್ಟ**
ಆಟದ ಮನವಾಗಿ ಅಂಗಳಕೈದೆವು | ಅಜ್ಜ ಕೇಳು | ನಾವು |
ಕೂಟದಿಂದೊಳಗಾಟಪಾಟದೊಳಗಿರೆ | ಅಜ್ಜ ಕೇಳು ||1||
ಕೂಪದಿ ಚೆಂಡು ಬೀಳಲು ಕಂಡು ನಿಂತರೆ | ಅಜ್ಜ ಕೇಳು | ಸುಪ್ರ |
ತಾಪ ಬ್ರಾಹ್ಮಣ ಬಂದು ಎತ್ತಿದನಾಕ್ಷಣ | ಅಜ್ಜ ಕೇಳು ||2|| 28 ||

**ಮಧುಮಾಧವಿ - ಏಕ**
ಭೀಷ್ಮನು ಕೇಳುತ ಹರುಷವನಾಂತು |
ಸುಸ್ಮಿತನಾಗುತ ಪೀಠದಿಂದಿಳಿದು ||
ರಶ್ಮಿ ತೇಜದಿ ಹೊಳೆಹೊಳೆಯುವ ದ್ವಿಜನ |
ಕಶ್ಮಲವಿರದೆ ಸತ್ಕರಿಸಿದ ಹದನ ||1||
ನಿಮಗಿದೋ ಹಾರ್ದಿಕ ಸ್ವಾಗತವಯ್ಯ |
ನಮನಗಳನು ಸ್ವೀಕರಿಸು ವಿಪ್ರವರ್ಯ ||
ಗಮನವೆಲ್ಲಿಂದಾಯ್ತೆಂದರುಹು ಸಂತಸದಿ |
ಸುಮನ ಮುದವ ಹೊಂದಿತೈಯಾಗಮನದಿ ||2|| 30 ||

**ದ್ವಿಜಾವಂತಿ - ಅಷ್ಟ**
ಆಲಿಪುದು ಮಮ ಬಾಳ ಬಟ್ಟೆಯ ಗೋಳಿನಾ ಕಥೆಯ | ಋಷಿವರ |
ಬಾಲನಾಗಿಯು ಏಳಿಗೆಯ ಕಂಡಾಳದಿಹ ವ್ಯಥೆಯ || ಬದುಕನು |
ಕೂಲಿಸಲು ಬಿಲ್ವಿದ್ಯೆಯೋಳಿಯ | ಪಾಲಿಸುತ ಭಾರ್ಗವನು ಹರಸಿದ |
ಖೂಳ ದ್ರುಪದ ಹಿಯಾಳಿಸಿದನವ | ನಾಲಯದಿ ಶಪಥವನು ಗೈದಿಹೆ ||1|| 31 ||

**ಕೇದಾರಗೌಳ - ಝಂಪೆ**
ತಾಳದಿರು ಚಿಂತೆಗಳನು | ಈವೆನೆ |
ನ್ನಾಲಯದೊಳಾಶ್ರಯವನು ||
ಬಾಲರಿಗೆ ಬಿಲ್ವಿದ್ಯೆಯ | ಮೂಲವನು |
ಪೇಳುತ್ತಲಿಲ್ಲಿರುವೆಯ ||1|| 32 ||

**ವಚನ**
ಇಂತೀ ಪರಿಯೊಳಿರಲಿತ್ತ ಅತ್ತ ಕಾಡಿನೊಳು ಶಬರಸುತ ಏಕಲವ್ಯನು ಮನದಲಿ ಹಲವುತರ ಯೋಚಿಸುತ್ತಲಿರ್ದಂ........

**ಸೌರಾಷ್ಟ್ರ - ತ್ರಿವುಡೆ**
ಭಿಲ್ಲರೆರೆಯ ಹಿರಣ್ಯಧನು ಸುತ |
ಚೆಲ್ವ ಕಣ್ಮಣಿ ಏಕಲವ್ಯನು |
ಬಿಲ್ಲು ವಿದ್ಯೆಯ ಕನಸುಗಳ ಮನ | ದಲ್ಲಿ ಕಂಡ ||1||
ಹೆತ್ತವಳ ಹಾರೈಕೆ ಗಳಿಸುತ |
ಹಸ್ತಿನಾಪುರದಲ್ಲಿ ದ್ರೋಣರ |
ಉತ್ತಮದ ಸೇವೆಯನು ಗೈವೆನೆ | ನುತ್ತ ಪೊರಟ ||2|| 34 ||

**ಮಧುಮಾಧವಿ - ತ್ರಿವುಡೆ**
ಮಗನೆ ಬಾ ಬಾ ಮುದ್ದಿನರಗಿಣಿ |
ಗಗನದಂಗಳ ಚಂದ್ರ ಬಾ ಬಾ |
ಮೊಗದೊಳುಕ್ಕುವ ಹರುಷವೇನೈ |
ಸೊಗದ ಪಯಣವಿದೆಲ್ಲಿಗೆ || 1|| 35 ||

**ಸಾವೇರಿ - ಅಷ್ಟ**
ಅಡಿಗೆರಗುತ್ತಿಹೆನು | ದ್ರೋಣಾಚಾರ್ಯ |
ರೆಡೆಗೀಗ ಪೊರಟವನು ||
ದೃಢಮನವಿತ್ತಿಹೆ ಕಡುಗಲಿ ವಿದ್ಯೆಗೆ |
ಒಡನೆ ಹಾರೈಸೆನ್ನನು | ಕಳುಹಿಸು ನೀನು ||1|| 36 ||

**ಕಾಂಬೋಧಿ - ಏಕ**
ಹುಡುಗ ನಿನ್ನ ನುಡಿಯಿದೇನು | ದಡಿಗರೊಡನೆ ಯುದ್ಧ ||
ಬಿಡದೆ ಬಹುದು ಬೇಡ ಬೇಡ | ಕಡೆಗೆ ಕೇಡೆ ಬದ್ಧ ||1|| 37 ||

**ವರಾಳಿ - ಏಕ**
ಇಕ್ಕಿತೇನು ದುಃಖ ಪಾಶ | ಬೇಡವಮ್ಮ | ನಮ್ಮ |
ಕಕ್ಕುಲತೆಯ ಪ್ರಾಣಿಗಳನು | ನೋಡಿದಮ್ಮ ||
ಸೊಕ್ಕಿದಂಥ ಸಿಂಹ ಹುಲಿಯು | ತಿಳಿಯಿದಮ್ಮ | ಬಿಡದೆ |
ಮುಕ್ಕುತಿಹುದ ಬಲ್ಲೆ ನೀನು | ಕಳುಹಿಸಮ್ಮ ||1|| 38 ||

**ಸಾಂಗತ್ಯ - ರೂಪಕ**
ನಾಡಿನ ಜನರೆಲ್ಲ ಗೂಢರು ನಮಗೆಲ್ಲ | ಬೇಡವೀ ಹವ್ಯಾಸ ಮಗುವೆ ||
ಆಡಿಕೊಂಡಿರು ನೀನು ಕಾಡಿನ ತುಂಬೆಲ್ಲ | ತೋಡಿಕೊಂಬೆನು ಮನದಳಲ ||1|| 39 ||

**ಘಂಟಾರವ - ಮಟ್ಟೆ**
ಚಿಂತೆ ಬಿಡುಬಿಡು | ಮಗನ ಮೇಲಣ ||
ಇಂತು ಮೋಹದಿ | ನುಡಿವೆ ಯೇನವ್ವ ||1||
ಶೀಲ ದ್ರೋಣರ | ಶಿಷ್ಯನಾಗುವೆ ||
ಮೇಲುದಾರಿಯ | ಕೃಪೆಯ ಹೊಂದುವೆ ||2|| 41 ||

**ಸೌರಾಷ್ಟ್ರ - ತ್ರಿವುಡೆ**
ಉಸಿರಲೇನೈ ಹೆಮ್ಮರದ ಕೆಳ |
ಟಿಸಿಲನೊಡೆಯವು ಬೇರೆ ಸಸಿಗಳು|
ಹೊಸಿಲ ದಾಟುವೆ ಹಠದಿ ಸುಖ ಸಂ | ತಸದಿ ಬಾಳು ||1||
ಉರುತರೋತ್ಸಾಹದಲಿ ಜನನಿಯ |
ಹರಕೆಗೊಳ್ಳುತ ಬೀಳುಗೊಂಡನು |
ಪುರ ಪ್ರವೇಶಿಸೆ ಬೆಡಗ ಕಾಣುತ | ಬೆರಗುವಟ್ಟ ||2|| 43 ||

**ಭಾಮಿನಿ**
ಬಿಲ್ಲು ತೋಮರ ಕುಂತ ಗದೆಗಳು | ಎಲ್ಲಿ ನೋಡಿದರಲ್ಲಿ ಬಗೆಬಗೆ |
ಯಲ್ಲಿಯಾಯುಧ ರಾಶಿ ಕಣ್ಮನ ಸೂರೆಗೊಳ್ಳುವವು ||
ಮಲ್ಲರಾ ಸಾಧನೆಗೆ ಬೇಕಾ | ದೆಲ್ಲ ಪರಿಕರವೇನನೆಂಬೆನು |
ಚೆಲ್ವ ಗುರುಗಳ ಪಾದಕೊಂದಿಸುತೊಳಿತ ಹೊಂದುವೆನು ||1|| 44 ||

**ದ್ವಿಪದಿ**
ಗುರು ಚರಣಗಳ್ಗೆ ಬಾಗಿದನು ವಿನಯದಲಿ |
ಕರುಣೆಯಿಂ ನುಡಿಸಿದನು ದ್ರೋಣ ವಹಿಲದಲಿ ||1|| 45 ||

**ಕಾಂಬೋಧಿ - ಅಷ್ಟ**
ಯಾರಯ್ಯ ಬಾಲಕ ನೀನು | ಮತ್ತೀ |
ದಾರಿಯೊಳಗೆ ಬಂದುದೇನು ||
ಮೋರೆಯನೀಕ್ಷಿಸೆ ಧೀರ ಲಕ್ಷಣಗಳು |
ತೋರುತಾರಣ್ಯದ ಹೂ ಮೊಗ್ಗಿನಂತಿಹೆ ||1|| 46 ||

**ಕಲ್ಯಾಣಿ - ಝಂಪೆ**
ಗುರುದೇವ ಶರಣೆಂಬೆ ರಕ್ಷಿಸೈ ಎನ್ನ |
ವರ ಶಬರಪತಿ ಹೇಮಧನುಸುತನು ಮುನ್ನ ||
ಸರಳ ವಿದ್ಯೆಯ ಸಾರವನು ತಿಳಿಯಲೆಳಸಿ |
ಹರುಷದಿಂ ಬಂದಿಹೆನು ಹಲವ ಹಂಬಲಿಸಿ ||1|| 47 ||

**ಕಾಂಬೋಧಿ - ಅಷ್ಟ**
ತರಳನೆ ಮರುಳೇನೋ ನಿನಗೆ | ಮೋಹ |
ದುರುಳಾಯ್ತೆ ವಿದ್ಯೆಯು ಹೇಗೆ ||
ಬರಿದಿಂತು ಗಗನಕೇಣಿಯನಿಟ್ಟು ಕುಸುಮಕೆ |
ಕರಚಾಚುತಿಹೆಯೇಕೆ ಶಸ್ತ್ರಾಭ್ಯಾಸದ ಚಿಂತೆ ||1|| 48 ||

**ಶಹನ್ - ಏಕ**
ಆಕೆವಾಳ್ತನಕಾಸೆ ಪಟ್ಟೆನು | ತಂದೆ |
ನೀ ಕರುಣಿಸು ವಿದ್ಯೆ ಗುಟ್ಟನು ||
ಸಾಕಿದ ಮೃಗಗಳ ರಕ್ಷಿಸೆ ಹೋರುವೆ |
ನೂಕುವೆ ಯಮನಿಗೆ ಹುಲಿಸಿಂಹಂಗಳ ||1|| 49 ||

**ಜಂಗಲಾ - ಏಕ**
ಪಾತ್ರಾಪಾತ್ರತೆಯರಿಯದೆ ಬೇಡಿದೆ | ಶಸ್ತ್ರಾಭ್ಯಾಸಗಳ ||
ಸುತ್ತುವೆ ವನದೊಳು ನಿನಗೇತಕೆ ಬಿಡು |
ಕ್ಷಾತ್ರೋಚಿತವಹ ವಿದ್ಯೆಗಳ ||1|| 50 ||

**ಶಂಕರಾಭರಣ - ಏಕ**
ಜಾತಿಹೀನನೆಂದು ಮನದ | ಜ್ಯೋತಿಯನ್ನು ಬೆಳಗದಿಹಿರೆ |
ಮಾತಿದಂತರಂಗವನ್ನು | ಘಾತಿಸಿರ್ಪುದು ||1||
ಪರುಷ ಮಣಿಯ ಸ್ಪರ್ಶ ಲೋಹ | ವರ ಸುವರ್ಣವಾಪುದೈಸೆ |
ತೊರೆಯ ನೀರು ಗಂಗೆ ಸೇರೆ | ಪರಮ ಪಾವನ ||2|| 52 ||

**ಕಾಂಬೋಧಿ - ಝಂಪೆ**
ಕೆಸರಿನಲಿ ಬೆಳೆದಿರುವ ನೈದಿಲೆಯು ಮೊಗವೆತ್ತಿ |
ಶಶಿಯ ನಿರುಕಿಪುದು ಸಮ ಭಲರೇ ||
ಹಸುಳೆ ನಿನ್ನುತ್ಸಾಹ ಶ್ರದ್ಧೆಯದ್ಭುತವು ನಾ |
ನಸಹಾಯಿ ಕುರುಸುತರ ಹೊರತು ||1|| 53 ||

**ಕೇದಾರಗೌಳ - ಝಂಪೆ**
ಬಹಳಾಸೆ ಹೊತ್ತು ಬಂದೆ | ಶರಣಾಗಿ | ಮಹನೀಯಗೆರಗಿ ನಿಂದೆ ||
ಸಹಜ ಜಾತಿಯ ಗೋಡೆಯು | ಅಡ್ಡ ಬರ | ಬಹುದೆಂದು ಭಾವಿಸದೆಯು ||1||
ಹೋಗಿ ಬಹೆ ಗುರುದೇವನೆ | ಹಾರ್ದಿಕನು | ರಾಗದಲಿ ಹರಸೆನ್ನನೆ ||
ಸೋಗಿನೊಳಗಣ ಬದುಕನು | ಒಪ್ಪಿಯದ | ನೀಗಲಾರದೆ ಪೊರಟೆನು ||2|| 55 ||

**ನೀಲಾಂಬರಿ - ರೂಪಕ**
ದಿಟವಾಯ್ತುವ್ವೆಯ ನುಡಿಗಳು | ಕಿಟಿ ಹುಲಿ ಸಿಂಹವ ನಾ ನಿ |
ಚ್ಚಟದಲಿ ಕೊಲ್ಲುವೆನೆನ್ನುವ | ಹಠ ನೀರಾಯ್ತುಯ್ಯೋ ||
ಸಟೆಯಾಯ್ತೆನ್ನಯ ನಂಬುಗೆ | ಅಟವಿಯ ಜನಗಳ ಹೃದಯದ |
ತಟವರಿಯದೆ ಹೋದರು ಶಿವ | ನಿಟಿಲದ ಲಿಪಿಯಷ್ಟೆ ||1||
ಕಣ್ಣಿಗೆ ಬಲು ಚೆಲುವಾಗಿಹ | ಬಣ್ಣಿಪ ಕಾಮನ ಬಿಲ್ಲಿನ |
ಬಣ್ಣಕೆ ಮರುಳಾಗಿರ್ದೆ ವಿ | ಷಣ್ಣತೆ ತೊರೆಯುವೆನು ||
ಮಣ್ಣಲಿ ಬಿದ್ದವ ಮತ್ತಾ | ಮಣ್ಣನ್ನಾಶ್ರಯಿಸೇಳುವೆ |
ಮಣ್ಣಿಂದೇಳ್ಗೆಯನಾಶಿಪೆ | ಎಣ್ಣಿದ ಛಲ ಬಿಡೆನು||2|| 57 ||

**ಭೈರವಿ - ಝಂಪೆ**
ಮಧ್ಯಪಾಂಡವಿ ಯಿತ್ತ | ಹೃದ್ಯಮಾಗಿಹ ಬೇಟೆ |
ಸಿದ್ಧತೆಯನೆಲ್ಲವನು | ಹೊದ್ದಿರ್ದ ತಾನು ||1|| 58 ||

**ಘಂಟಾರವ - ಅಷ್ಟ**
ಸರಳ ವಿದ್ಯೆಯ ಪರಮ ಪರೀಕ್ಷೆಗೆ |
ಗುರುಗಳಪ್ಪಣೆ ಪಡೆದು ಬೇಟೆಗೆ | ತೆರಳುವೆನು ಗಣ ಕೂಡುತ ||1||
ತಮ ವಿಮರ್ದನ ದಿವ್ಯ ಚೈತನ್ಯಕೆ |
ನಮಿಸಿ ಬೇಡುವೆವೊಂದುಗೂಡುತ | ಗಮಿಸುವೆವು ಮೃಗ ಬೇಟೆಗೆ ||2||
ಒಲಿದು ಹಾರೈಸಿ ಕಳುಹಿಸಿರೆಮ್ಮನ್ನು |
ನಿಲದೆ ಶರ ಕೌಶಲವ ತೋರ್ಪೆವು | ಬಲಿತ ಮನದುತ್ಸಾಹದಿ ||3|| 61 ||

**ಆರ್ಯಸವಾಯಿ - ಏಕ**
ಮೆಚ್ಚುಗೆಯಾಯಿತು ನಿಶ್ಚಯವಿದು ಸರಿ |
ಹೆಚ್ಚಿನ ಹುಮ್ಮಸ ಕೆಡುಕಹುದು ||
ಎಚ್ಚರಿಕೆಗೆ ನಾ | ನಿಚ್ಚಿಸಿ ಬಹೆ ಶರ |
ವೆಚ್ಚುವ ಬಗೆ ನೋಡಲ್ಕಹುದು ||1|| 62 ||

**ನಾದನಾಮಕ್ರಿಯೆ - ಅಷ್ಟ**
ಮೃಗಯಾ ವಿನೋದದುತ್ಸಾಹವ | ಸರಿ |
ಮಿಗಿಲಾಗನುಭವಿಪ ಮೋದವ ||
ಸೊಗದಿ ಹೊಂದುತಲೆಲ್ಲ ಪೊರಟರು | ಬಗೆ |
ಬಗೆಯಾಯುಧವನಾಂತು ನಡೆದರು ||1||

ಕೈರಾತ ಬಳಗವ ಕರೆಸುತ | ಹಲ |
ವಾರು ಶುನಕ ದಳ ಕೂಡುತ ||
ಭಾರಿಯಾರ್ಭಟದ ಗದ್ದಲದಿಂದ | ಪೇಳ |
ಲಾರಿಗಳವು ಸಂಭ್ರಮದ ಚೆಂದ ||2|| 64 ||

**ವಚನ**
ಗುರುವಿನಿಂ ಬೀಳ್ಕೊಂಡ ಏಕಲವ್ಯನು ಮಣ್ಣಿನಿಂದ ಗುರುಮೂರ್ತಿಯನ್ನು ಮಾಡಿ, ಶರವಿದ್ಯೆಯಭ್ಯಸಿಪ ಪರಿಯೆಂತೆನೆ -

**ಶ್ರೀ - ಏಕ ( ಮಾರವಿ ಮಟ್ಟು)**
ಮೂರ್ತಿಯು ಮಣ್ಣಿನದಾದರು ಬುದ್ಧಿಗೆ | ಸ್ಫೂರ್ತಿಯ ಕಿಡಿಯಿತ್ತೆ ||
ಕೀರ್ತಿಸುವೆನು ಗುಣನಿಧಿ ಗುರುವರ ನಾ | ಪೂರ್ತಿಯ ಮನವಿತ್ತೆ ||1||
ಏಕಾಗ್ರತೆಗೀ ಭಂಗವ ತಂದಿಹ | ನೇಕಧ್ವನಿಗಳನು ||
ಕಾಕುತನವ ನಿಲ್ಲಿಸುವೆನು ಮಾರ್ಗವ | ನೀ ಕರುಣಿಸು ಗುರುವೆ ||2||
ಶರವನು ಚಾಪಕೆ ಸೇರಿಸುತೀಕ್ಷ್ಣ | ಸ್ವರ ಬಂದೆಡೆ ಬಿಡಲು ||
ನಿರುಕಿಸದಲೆ ದನಿ ನಿಂತಪುದೇಂ ತವ | ಕರುಣೆಯ ಶಿಶು ನಾನು ||3|| 67 ||

**ಸೌರಾಷ್ಟ್ರ - ತ್ರಿವುಡೆ**
ಬೊಗಳಿ ಬೊಬ್ಬಿಡುತಿರುವ ಶುನಕದ |
ತೆಗೆದ ಬಾಯಿಯು ಮುಚ್ಚದಂದದಿ |
ತಗುಲಿದವು ಶರ ಪಾರ್ಥ ಕಾಣುತ | ಬಗೆದ ಮನದಿ ||1||
ಅಮಮ ಚೋದ್ಯವಿದೇನು ಶಿವಶಿವ |
ಶ್ರಮವ ಪಡುತಿಹ ಶುನಕಕೀತೆರ |
ಕ್ರಮದೊಳೆಚ್ಚವರಾರು ಶರಗಳ | ನಿಮಿಷದಲ್ಲಿ ||2||
ಸುತ್ತಮುತ್ತಲದಾರು ಕಾಣರು |
ವಿಸ್ತರದ ವನ ಮಧ್ಯದಲ್ಲಿನ |
ಉತ್ತಮದ ಬಿಲ್ಗಾರನಾರದೆ| ನುತ್ತ ನೋಳ್ಪ ||3||
ಕಂಡನರ್ಜುನ ಚಾಪ ಶರವು |
ದ್ದಂಡ ತನದಲಿ ಧರಿಸಿಹುದ ಹಳ |
ವಂಡಗೊಳುತಲಿ ಮನದಿ ತಾ ಬೆಸ | ಗೊಂಡನಾಗ ||4||
ಆರು ನೀನೆಲೆ ಪೋರ ಪೆತ್ತವ |
ರಾರು ಚಿತ್ತಾಕರ್ಷಣೆಯ ಘನ |
ಶೂರತನದಿಂ ಮೋಡಿ ಮಾಡಿದೆ | ಭೋರನುಸುರು ||5|| 72 ||

**ಸುರುಟಿ - ಏಕ**
ಆಗ್ರಹವಿದಕೇಕೆ | ಉಸುರುವೆ |
ಶೀಘ್ರದೊಳಿರಸರಿಕೆ ||
ಸ್ವಗೃಹ ವನವೆಂದಿರುತಿಹ ನಾ ಶಬ |
ರಾಗ್ರೇಸರಸುತ ನಿನ್ನನು ಪೇಳ್ವೆ ||1|| 73 ||

**ಪಂಚಘಾತ - ಮಟ್ಟೆ**
ಶ್ವಾನ ತಾನು ಬೊಗಳುತಿರಲು | ಬಾಣ ಬಿಟ್ಟು ನಿಲ್ಲಿಸಿರುವೆ |
ಕ್ಷೋಣಿಯೊಳಗೆ ವಿದ್ಯೆಯಿತ್ತ | ಮಾನ್ಯನಾವನು ||1|| 74 ||

**ಸಾಂಗತ್ಯ - ರೂಪಕ**
ಪೂಜೆಗೆ ಭಂಗ ತಂದಿಹ ಸದ್ದ ನಿಲ್ಲಿಸೆ |
ಮಾಜದೆ ಸಾಯಕವಿತ್ತೆ ||
ಓಜನಾರೆಂದು ಕೇಳ್ವೆಯ ವಿದ್ಯಾದಾತ ಬಿ |
ಲ್ಲೋಜರೊಳ್ ಶ್ರೇಷ್ಠನು ದ್ರೋಣ ||1|| 75 ||

**ಭಾಮಿನಿ ಅರ್ಧ**
ಪಾರ್ಥನದ ಕೇಳುತ್ತ ನಿಲ್ಲದೆ | ಸ್ವಾರ್ಥ ಮನದಲಿ ಗೂಡು ಕಟ್ಟಲು |
ಆರ್ತಿಯಿಂದಲಿ ಗುರುವಿನೆಡೆಗೈತರುತಲಿಂತೆಂದ ||1|| 76 ||

**ಕಾಂಬೋಧಿ - ಝಂಪೆ**
ಲಾಲಿಪುದು ಗುರುವರ್ಯ ಧರಣಿಯಲಿ ಶ್ರೇಷ್ಠ ಬಿ |
ಲ್ಲಾಳುವಾಗಿಪ ವಚನವಿತ್ತು ||
ಪಾಲಿಸಿದಿರೀಗೇಕೆ ಸಾಮಾನ್ಯ ಬೇಡನಿಗೆ |
ಮೇಲೆನಿಪ ಶಬ್ದಭೇದಿಯನು ||1||

ದಾಸ್ಯ ಭಾವದಿ ನಾನು ನಿತ್ಯ ಸೇವಿಸುವುದಿದ |
ದೃಶ್ಯವಾಯಿತೆ ಗುರುವರೇಣ್ಯ ||
ದಸ್ಯುಗಳ ಕೈಯ ಸಾಯಕದಿ ಬಲು ಬಲಗೊಳಿಸೆ |
ವಶ್ಯವಾಗದೆ ನಮ್ಮ ನೆಲವು ||2||
ವಿವಶನಾಗದೆ ಯೋಚಿಸೆಲೆ ಪಾರ್ಥ ನೀ ಪೇಳ್ದ |
ಕುವರನಾರೆಂದರಿಯೆ ನಾನು ||
ಅವನಿಯೊಳ್ ಕಡುಚೋದ್ಯ ಸಾವಧಾನದಿ ನೋಳ್ಪ |
ಅವನಾರು ತೋರು ತೋರಯ್ಯ ||3|| 79 ||

**ಕಂದ**
ದ್ರೋಣಂ ಬೆರಗಿಂ ನಡೆತರೆ |
ಕಾಣುತ ಶಬರಸುತ ಪುಳಕಗೊಂಡತಿ ನಲಿದಂ ||
ಮಾಣದೆ ತಾ ಕರೆತಂದಾ |
ಗೋಣಂ ಬಗ್ಗಿಸಿ ವಿನೀತ ಭಾವದೊಳೆಂದಂ ||1|| 80 ||

**ಬೇಗಡೆ – ಅಷ್ಟ (ಬಂದನು ಮುರಹರನಾಗ ಎಂಬಂತೆ)**
ಮುದದಿ ಬಂದೆಯ ಗುರುವರ್ಯ | ಓ |
ಸದಮಲ ಸುಚರಿತಾಚಾರ್ಯ ||
ಅಧಿಕ ಸಂಪ್ರೀತಿಯ | ಪದುಳದೊಳಿರಿಸಿದೆ |
ಹೃದಯವದರಳಿತು | ಹದನವದೇನೆಂಬೆ ||1|| 81 ||

**ಭಾಮಿನಿ**
ಮುಗುಧ ನೀನಂದಿನದೊಳೆನ್ನೆಡೆ | ಸೊಗದಿ ಬಂದತಿ ವಿದ್ಯೆ ಬೇಡಿದೆ |
ಅಗಲಲಾರದೆ ನಿನ್ನನಾಶೀರ್ವದಿಸಿ ಕಳುಹಿದೆನು ||
ಬಗೆಬಗೆಯ ಶರವಿದ್ಯೆ ಪೊಲಿದಿದೆ | ಒಗುಮಿಗೆಯ ತೇಜಸ್ಸು ತುಂಬಿದೆ |
ಜಗದೊಳಾಶ್ಚರ್ಯವಿದು ಗುರುವರನಾರು ಕಲಿಸಿದರು ||1|| 82 ||

**ಆರ್ಯಸವಾಯಿ - ಏಕ**
ಮೃತ್ತಿಕೆಯಿಂದಲಿ ಮೂರ್ತಿಯ ರಚಿಸಿದೆ |
ನಿತ್ಯದಿ ನಿಮ್ಮಯ ಧ್ಯಾನದಲಿ ||
ಚಿತ್ತಕೆ ಪ್ರೇರಣೆಯಿತ್ತತಿ ಪೊರೆದಿರಿ |
ಮತ್ತಿನದರಿಯೆನು ದಾರಿಯಲಿ ||1|| 83 ||

**ಮುಖಾರಿ - ಏಕ**
ಭಳಿರೆ ಮನ ಬಲು ಮೆಚ್ಚಿದೆ ಕೃತಿಗೆ | ಈ ಘನ ಶ್ರದ್ಧೆಯ ಮತಿಗೆ |
ಭಳಿರೆ ಮನ ಬಲು ಮೆಚ್ಚಿದೆ ಕೃತಿಗೆ ||ಪ||
ಕಾಲಕಾಲಕು ಸರ್ವರಾದರ್ಶ | ಸನ್ಮಾರ್ಗವ ತೋರಿದೆ |
ಬಾಳಿಗಾಯ್ತು ವಾತ್ಸಲ್ಯದ ವರ್ಷ ||
ಶೀಲ ಗುಣಾಢ್ಯನೆ | ಏಳಿಗೆ ಪೂರ್ಣಕೆ ||
ಕೀಳೆಣಿಸದೆ ನೀ | ಪಾಲಿಸು ದಕ್ಷಿಣೆ ||1|| 84 ||

**ಆರ್ಯಸವಾಯಿ - ಏಕ**
ಗರ್ವವ ತೊರೆವುತ | ಸರ್ವಾರ್ಪಣದಲಿ |
ನಿರ್ವಹಿಸುವೆನ್ನೈ ಪದತಲಕೆ ||
ಶರ್ವಸಮೋತ್ತಮ | ಪಾರ್ವನೆ ಬಯಕೆಯ |
ಊರ್ವಿಯಾಣೆ ಕೊಟ್ಟಿಹೆನಿದಕೆ ||1|| 85 ||

**ಯಮನ್‌ಕಲ್ಯಾಣಿ - ತ್ರಿವುಡೆ**
ಗರ್ಭದಲಿ ನಿಶ್ಕಲ್ಮಷವ ತಾ | ತಬ್ಬಿಕೊಂಡಿಹ ಬಾಲನೆ ||
ಹೆಬ್ಬೆರಳ ಬೇಡುತಿಹೆ ಮಾನಸ | ದುಬ್ಬಿನಲಿ ಕೊಡುಕೊಡದನೆ ||1|| 86 ||

**ನೀಲಾಂಬರಿ - ಆದಿ**
ಧನ್ಯನಾದೆ ಗುರುವರೇಣ್ಯ | ನಿಮ್ಮಾಪೇಕ್ಷೆಯಂತೆ ||
ಎನ್ನ ಹೆಬ್ಬೆರಳನಿತ್ತೆ | ಮನ್ನಿಸಯ್ಯ ಮುಂತೆ ||1|| 87 ||

**ಯಮನ್‌ಕಲ್ಯಾಣಿ - ತ್ರಿವುಡೆ**
ಮಾತು ಮೌನಕೆ ಶರಣು ಹೊಂದಿತು | ಜಾತಿ ಧರೆಯೊಳಗುರುಳಿತು ||
ಪ್ರೀತಿ ಹೃದಯವು ಅಂತರಂಗದೆ | ನೀತಿಯಿದು ನೆಲೆಯಾಯಿತು ||1|| 88 ||

**ಸಾಂಗತ್ಯ - ರೂಪಕ**
ಕಾಲನಂದನ ಮೊದಲಾಗಿ ಕೌರವ ಪಾಂಡು |
ಬಾಲರಿಂಗೆಲ್ಲ ವಿದ್ಯೆಯನು ||
ಕಾಲಕಾಲಕೆ ಬೋಧಿಸುತ್ತಿರಲೊಂದಿನ |
ಆಲೋಚಿಸಿದ ದ್ರೋಣನಂದು ||1||
ಅಪವಿತ್ರ ಮನಸಿನ ದ್ರುಪದನ ಶಿಕ್ಷಿಸೆ |
ವಿಪುಲವಕಾಶ ಸಿಕ್ಕಿಹುದು ||
ಉಪದೇಶವಿತ್ತೆನ್ನ ಶಿಷ್ಯರ ಕಳುಹಿಸಿ |
ಉಪಸಂಹರಿಪೆ ದ್ವೇಷವನ್ನು ||2|| 90 ||

**ಸುರುಟಿ - ಏಕ**
ಮಕ್ಕಳೆಲ್ಲ ಬನ್ನಿ | ಬಯಕೆಯ |
ಒಕ್ಕಣಿಸುವೆನೆನ್ನಿ ||
ಅಕ್ಕರೆಯಿಂದಲಿ ಅಕ್ಷರವಿತ್ತಿಹೆ |
ಸಾಕ್ಷರರಲಿ ನೀವ್ ತಕ್ಕವರಾದಿರಿ ||1||
ವಿದ್ಯಾ ಮಂಗಲಕೆ | ದಕ್ಷಿಣೆ |
ಹೊದ್ದುವ ವಾಂಛಿತಕೆ ||
ಹೃದ್ಯ ವಿಚಾರವ ಬದ್ಧದಿ ಪೇಳುವೆ | ಯುದ್ಧದಿ ಕಾದಿ ನಿ |
ಬದ್ಧಿಸಿ ದ್ರುಪದನ ||2|| 92 ||

**ಮಾರವಿ - ಏಕ**
ಶ್ರೀಮುಖದಪ್ಪಣೆ ಶಿರದೊಳಗಾಂತೆವು | ಸೋಮಕುಲಾನ್ವಿತರು ||
ಕಾಮಿಸಿ ಜಯಸಿರಿ ಕೈಸೆರೆ ಪಿಡಿವೆವು | ಭೂಮಿಪ ದ್ರುಪದನನು ||1|| 93 ||

**ಮೋಹನ - ಏಕ**
ತಡೆಯೋ ಮುಂದಡಿಯಿಡದಲೆ ನೀ ನಡೆಯೋ |
ದಡಿಗರ ಹುಟ್ಟನೆ ಅಡಗಿಸಿದಾ ಮಹ |
ಪೊಡವಿಪ ದ್ರುಪದನ ಗೊಡವೆಯಿದೇತಕೊ ||1|| 94 ||

**ಕೇದಾರಗೌಳ - ಝಂಪೆ**
ದ್ವಾರ ಪಾಲಕ ಕೇಳೆಲಾ | ಪಾಂಚಾಲ |
ದಾ ರಾಜನೆಡೆ ಸಾರೆಲಾ ||
ಹೋರಾಟವನ್ನು ಬಯಸಿ | ಬಂದಿಹೆನು |
ಶೂರತಮ ಪಾರ್ಥ ಸಹಸಿ ||1|| 95 ||

**ವಚನ**
ಭೂಪನೊಡ್ಡೋಲಗದಿ ಮಂಡಿಸಿರೆ ಚಾರನೈತಂದ -

**ಪುನ್ನಾಗ - ಅಷ್ಟ**
ಪಾದಕೆ ವಂದಿಸಿ ನಿಂದೆ | ದೊರೆಯೆ |
ನೀ ದಯೆ ದೋರಯ್ಯ ಮುಂದೆ ||
ಸಾದರದಿಂದಲಿ ನಿತ್ಯವು ಪೊರೆದಿಹೆ |
ಬಾಧಿಸುತಿಹರೈ ದ್ವಾರದಿ ಬಾಲರು ||1||
ಬಿಡದಂತೆ ತಡೆದರೆಯವರು | ತಾವ್ |
ಗಡಿಮೀರಿ ಮುನ್ನುಗ್ಗುತಿಹರು ||
ಕಡುಗಲಿತನದಲಿ ರಣಕೊಡಬಡುತಿಹ |
ಹುಡುಗರ ಬಿಡದೆಯೆ ಒಡೆಯ ಪರೀಕ್ಷಿಸು ||2|| 97 ||

**ಸೌರಾಷ್ಟ್ರ - ತ್ರಿವುಡೆ**
ಅರರೆ ಬಾಲರು ಬುದ್ಧಿ ಶೂನ್ಯರೆ |
ಹರಿಯ ಕೆಣಕುತ ಬದುಕಲಾಪರೆ |
ಭರಿತ ಚೋದ್ಯವಿದೇನು ಶೌರ್ಯವೊ | ತರಳರಲ್ಲಿ ||1||
ರಣದ ಛಲಗಳ ನೋಡಬೇಕೈ |
ಚಣದಿ ಸೇನೆಯು ಸಿದ್ಧಗೊಳ್ಳಲಿ |
ಮಣಿಮಯದ ರಥವೇರಿ ಪೋಗುವೆ | ಘನವಿಭವದಿ ||2|| 99 ||

**ಭೈರವಿ - ಏಕ**
ವಿಪರೀತದ ಕಾರ್ಯಗಳು | ಈ | ದ್ರುಪದನೊಳೇಂ ಕದನಗಳು ||
ಅಪಹಾಸ್ಯಕ್ಕೀಡಹರೆ | ನೀವ್ | ವಿಫಲಕೆ ಕರವಿಕ್ಕಿದಿರೆ ||1||
ಭೂವರ ದ್ರುಪದನೆ ಕೇಳು | ತಲೆ | ಗಾವರ ನೀ ಬರ ಹೇಳು ||
ಧಾವಿಸಿದೀ ಭಟರೊಳಗೆ | ರಣ | ಭಾವಿಸೆ ಸುಲಭವೆ ಹೀಗೆ ||2||
ನುಡಿಗಳ ಸರಪಣಿ ಚೆಂದ | ತಲೆ | ಗಡರಿದ ಬರಿ ಮದದಿಂದ ||
ಒಡನುಸುರಿದರೆಂತೆನುವೆ | ಮುಂ | ದಡಿಯಿತ್ತರೆ ಶಿರಗಡಿವೆ ||3|| 102 ||

**ಭಾಮಿನಿ ಅರ್ಧ**
ರಣದಿ ಕೌರವ ಬಳಗ ಹಿಂದಡಿ | ಯನುಕರಿಸುತಿರೆ ಪಾರ್ಥ ಭೂಪನ |
ಅನುಜರೆಲ್ಲರ ಸೋಲಿಸುತ್ತಿರೆ ದ್ರುಪದ ತಡೆದೆಂದ ||1|| 103 ||

**ಭೈರವಿ - ಅಷ್ಟ**
ನಿಲ್ಲೆಲೋ ಬಾಲ ನೀನು | ಮೋಹಕ ಘನ | ಚೆಲ್ವಿಗೆ ಸೋತಿಹೆನು ||
ಸೊಲ್ಲಿಸೆನಗೆ ಪೆತ್ತ ಮಲ್ಲ ಮಾತಾಪಿತ | ರೆಲ್ಲ ವಿವರಗಳನು ||1||
ಛಲದ ಕಾದಾಟದಲಿ | ಕುಲ ವಿವರವ | ತಿಳಿಯಬೇಕಲ್ಲದಿಲ್ಲ ||
ಉಲಿಯುತಿರುವೆ ವ್ಯರ್ಥ | ಲಲನೆ ಕುಂತಿಯ ಸುತ | ಛಲ ಪ್ರದರ್ಶಿಸುವೆನಿಲ್ಲ ||2||
ಪೂತುರೆ ಮೆಚ್ಚಿದೆನು | ನಮ್ಮಯ ಜಾತಿ | ಮಾತುಗಳೊಪ್ಪುತಾನು ||
ಈ ತೆರ ನಮ್ಮೊಳು ಏತಕೆ ವೈರವು | ನೀ ತಿಳುಹೆಲ್ಲವನ್ನು ||3||
ಸ್ನೇಹಿತಗಪಚಾರವ | ಗೈದಿರುವಂಥ | ದ್ರೋಹಿಯ ಹಿಡಿತರುವ ||
ದಾಹದೊಳೈತಂದೆ ಕಾಹುರವೆನ್ನೊಳು | ಬಾಹಿರವೆಂಬೆನಯ್ಯ ||4|| 107 ||

**ಶಂಕರಾಭರಣ – ಮಟ್ಟೆ**
ಚಾಪ ಪಿಡಿದು ರಣದೊಳೆದುರು ನಿಂತು ಸೆಣಸುವ |
ನೀ ಪ್ರತಾಪಿಯೇನೊ ತರಳ ಬೇಡವೀಹವ ||1||
ಹುಡುಗನಾದರೆನ್ನ ವಿವಿಧ ಅಸ್ತ್ರ ಕೌಶಲ |
ತಡೆದುಕೊಂಬೆಯೇನೋ ಬರಿದೆ ನುಡಿಯಬೇಡೆಲಾ ||2|| 109 ||

**ಖಮಾಚು - ಏಕ**
ಧುರದಲಿ ಸೋತಿಹ ಧರಣಿಪ ದ್ರುಪದನ | ಕರಗಳ ಬಿಗಿವುತಲಾಗ ||
ನರನು ಪಚಾರಿಸಿ ನುಡಿಸಿದನಾಕ್ಷಣ | ವರ ಪೌರುಷ ನುಡಿಯೀಗ ||1|| 110 ||

**ಹಿಂದುಸ್ಥಾನಿ - ರೂಪಕ**
ಭೂಪ ಘನ ಪ್ರತಾಪ ತೋರೋ | ಚಾಪವಿದ್ಯೆ ಸಾರ ಬೀರೋ |
ಸ್ತೂಪವಾಗಿ ನಿಂತೆಯಹಹ | ಶಾಪವಾಯ್ತೆ ಬಿಂಕ ಬರಹ ||1||
ದ್ರುಪದ ನಿನ್ನ ಸೆರೆಯ ಪಿಡಿದೆ | ಕಪಟ ಕುಟಿಲತನವದಿರದೆ |
ನಿಪುಣ ಗುರುಗಳೆಡೆಗೆ ಒಯ್ವೆ | ಸಫಲವಾಯ್ತು ಜನುಮವೆನುವೆ ||2|| 112 ||

**ಭಾಮಿನಿ**
ಎಂದು ಜರೆಯುತ ದ್ರುಪದನನು ತಾ | ನಂದು ರಥದಲಿ ಕುಳ್ಳಿರಿಸುತಲಿ |
ಬಂದ ಕರಿಪುರಕೆಂದು ಪಾರ್ಥನು ಹೊಂದಿ ಹರುಷವನು ||
ಅಂದದಿಂ ಪಲ್ಲಂಗ ಚರಣಕೆ | ಬಂಧಿಸುತ ನರ ನಿಂದಿರಲ್ಕೆ ವ |
ಸುಂಧರೇಶನ ಕಂಡು ದ್ರೋಣನು ಕಿಡಿಗರೆವುತೆಂದ ||1||
ಸುಡಿಸುಡೀ ಮೋರೆಯನು ಗರ್ವಿಯೆ | ದಡಿಗ ನಿನ್ನಯ ಸ್ಥಿತಿಯಿದೆಂತೈ |
ಬಡವ ಬಲ್ಲಿದಗೆಲ್ಲಿ ಸ್ನೇಹಗಳೆಂದು ಪ್ರಶ್ನಿಸಿದೆ ||
ನುಡಿದುದನು ನಾ ಪೂರ್ಣ ಗೊಳಿಸಿದೆ | ಪೊಡವಿ ಭಾಗದೊಳರ್ಧವಿತ್ತಿಹೆ |
ಸೊಡರದುರಿಯಲಿ ಸ್ನೇಹ ಹೃದಯದಿ ತೆರಳಿ ಬದುಕಯ್ಯ||2||
ಎಮ್ಮ ಜಾತಿಯ ತರಳನಿಂದಲಿ | ಬ್ರಾಹ್ಮಣನು ಅಪಮಾನಗೊಳಿಸಿದ |
ಮರ್ಮವೆಂತೈ ಕ್ಷತ್ರಿಯನ ಛಲದೋರುವೆನು ಬಿಡದೆ ||
ಹಮ್ಮಿನಿಂದಲಿ ಮಖವ ಗೈದತಿ | ಸಮ್ಮುದದಿ ಮಗನನ್ನು ಪಡೆವುತ |
ಹೆಮ್ಮೆಯಿಳಿಸುವೆ ಪಾರ್ಥಗೆನ್ನುತ ಸುತೆಯ ಹೊಂದುವೆನು ||3|| 115 ||

**ಸಾವೇರಿ - ತ್ರಿವುಡೆ**
ನೆಲವ ನೋಡುತ ಪೊರಟ | ದ್ರುಪದಾಖ್ಯನು | ತಲೆಯ ತಗ್ಗಿಸಿ ನಡೆದ ||
ಗೆಳೆತನಕೆ ಅಪಮಾನ ಗೈದಿದ| ನೆಲೆಯನರಿತನು ಭೂಪ ತನ್ನೊಳು |
ಹೊಳಹುದೋರಿ ಪವಿತ್ರ ಸ್ನೇಹಕೆ | ಸಲುವ ಸತ್ಯದ ಸ್ಥಿತಿಯಿದಾಯ್ತೆ ||1|| 116 ||

**ಮಧುಮಾಧವಿ - ತ್ರಿವುಡೆ**
ಹೊದ್ದಿದೆನು ದಕ್ಷಿಣೆಯ ಪಾರ್ಥನೆ |
ಹೃದ್ಯವಾಯಿತು ನಿಮ್ಮ ಸಾಧನೆ |
ವಿದ್ಯೆಯಿಂ ಸತ್ಕೀರ್ತಿ ಗಳಿಸುತ |
ಗೆದ್ದು ಬಾಳಿರಿ ಬದುಕನು ||1|| 117 ||

**ಭಾಮಿನಿ**
ಈ ಮಹಾಭಾರತದ ಕತೆಯನು | ನಾ ಮಹಾಬಲನಿಟಗಿಯೂರಿನ |
ಭೂಮಿಸುರ ಕುಲದಲ್ಲಿ ಪುಟ್ಟಿಹ ಯಕ್ಷಸೇವಕನು ||
ಕಾಮಹರ ರಾಮೇಶ್ವರನ ಕರು | ಣಾ ಮಹೋದಧಿಯಲ್ಲಿ ಮೀಯುತ |
ನಾಮ ಗುರುದಕ್ಷಿಣೆಯ ಬರೆದೆನು ಯಕ್ಷಗಾನದಲಿ ||1|| 118 ||

**ಯರಕಲಕಾಂಬೋಧಿ - ತ್ರಿವುಡೆ**
ಮಂಗಳಂ ಶ್ರೀ ಇಷ್ಟಿಕೆಯ ಗೌ | ರಾಂಗ ರಾಮೇಶ್ವರನಿಗೆ ||
ಮಂಗಳಂ ಶ್ರೀ ಗೌರಿ ಚರಣಕೆ | ರಂಗ ವಿಠಲನ ಪಾದಕೆ ||1|| 119 ||
ಮಂಗಳಂ ಶುಭ ಮಂಗಳಂ

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪ್ರಕಟಗೊಂಡಿಲ್ಲ

**ಪ್ರಸಂಗ ಪ್ರತಿ ಆಧಾರ :** ಲೇಖಕರ ಹಸ್ತಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಇಟಗಿ ಮಹಾಬಲೇಶ್ವರ ಭಟ್ಟ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಇಟಗಿ ಮಹಾಬಲೇಶ್ವರ ಭಟ್ಟ

**ಅಂತರಜಾಲ ಪ್ರತಿ ಬರವಣಿಗೆ:** ಇಟಗಿ ಮಹಾಬಲೇಶ್ವರ ಭಟ್ಟ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ .ಎಸ್., ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ಶಿವಕುಮಾರ ಬಿ. ಎ. ಅಳಗೋಡು, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ